ಓ. ಎಸ್. ನಂಃ116/2019

ಪಿ. ಡಬ್ಲ್ಯೂಃ 1

ದಿಃ 17-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಸ್ ಜೆ ಪ್ರತಿವಾದಿ ಪರ ವಕೀಲರಿಂದ ಃ</u>

3. ಸರ್ವೆ ನಂ 73 ಒಟ್ಟು 7 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಇದು ಮೂಲತಃ ನನ್ನ ಅಜ್ಜ ದುಂಡಪ್ಪರವರ ಹೆಸರಿನಲ್ಲಿ ಇತ್ತು. ದುಂಡಪ್ಪರವರಿಗೆ 6 ಜನ ಮಕ್ಕಳು ಇದ್ದರು. ಸದರಿ ಸರ್ವೆ ನಂ 73, 6 ಜನಗಳಲ್ಲಿ ಯಾರಿಗೆ ಹೋಯಿತು ಎಂದರೆ ಸಾಕ್ಷಿಯು ಗುರುಪಾದಪ್ಪ ದುಂಡಪ್ಪ ಕಲಿವಾಳ ಮತ್ತು ಚನ್ನಬಸಪ್ಪ ದುಂಡಪ್ಪ ಕಲಿವಾಳ ಅವರಿಗೆ ಹೋಯಿತು ಎಂದು ನುಡಿಯುತ್ತಾರೆ . ಎಷ್ಟನೇ ಈಸವಿಯಲ್ಲಿ ಭಾಗವಾಯಿತು ಎಂದರೆ ಸಾಕ್ಷಿಯು ನಾನು ಸಣ್ಣವನಿದ್ದೆ ಎಂದು ನುಡಿಯುತ್ತಾರೆ . ನನ್ನ ತಾಯಿಯ ಹೆಸರು ಗಿರಜವ್ವ ಇರುತ್ತದೆ. ಚನ್ನಬಸಪ್ಪ ರವರ ಮಗ ನಾಗರಾಜ ಎಂದರೆ ಸರಿ. ನಾಗರಾಜನಿಗೆ 3 ಎಕರೆ 26 ಗುಂಟೆ ಮತ್ತು ಶಂಕ್ರಪ್ಪ ಕಲಿವಾಳ ಇವರಿಗೆ 3 ಎಕರೆ 27 ಗುಂಟೆ ವಾಟನಿಯಾಯಿತು ಎಂದರೆ ಸರಿ. ವಾಟನಿ ಆದ ಪ್ರಕಾರ ಉತಾರ ಆಗಿರುತ್ತವೆ ಎಂದರೆ ಸರಿ. ವಾಟನಿಯಾದ ಪ್ರಕಾರ ನಕಾಶೆಯು ಆಯಿತು ಎಂದರೆ ಸರಿ. ನೀವು ಹಿರಿಯರು ಒಪ್ಪಂದ ಆಯಿತು ಎಂದು ಹೇಳಿದ್ದು ಅದು ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮಣ್ಣ ಬಿಟ್ಟುಕೊಟ್ಟಿದ್ದು ಎಂದು ನುಡಿಯುತ್ತಾರೆ . ಚನ್ನಬಸಪ್ಪ ನನ್ನ ಕಾಕಾ ಇರುತ್ತಾರೆ. ನನ್ನ ಅಣ್ಣ ಈರಪ್ಪ ಮಲಕಪ್ಪ ಕಲಿವಾಳ ಇರುತ್ತಾರೆ . ಇವರು ಬಿಟ್ಟು ಕೊಟ್ಟ ಪ್ರಕಾರ ನಾವು ವಹಿವಾಟು ಮಾಡಿಕೊಂಡಿರುತ್ತೇನೆ. ಈರಪ್ಪ ಮಲಕಪ್ಪ ಕಲಿವಾಳ ರವರು ಯಾವಾಗ ಮತ್ತು ಹೇಗೆ ಬಿಟ್ಟು ಕೊಟ್ಟರು ಎಂದರೆ ಸಾಕ್ಷಿಯು ನಾನು ಸಣ್ಣವನಿದ್ದೆ ಎಂದು ನುಡಿಯುತ್ತಾರೆ. ನಾವು ಈರಪ್ಪ ಮಲಕಪ್ಪ ಕಲಿವಾಳರವರಿಗೆ ಬಿಟ್ಟು ಕೊಡಿ ಎಂದು ಕೇಳಿದಾಗ ಅವರು ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

4. ಈರಪ್ಪ ಮಲಕಪ್ಪ ಕಲಿವಾಳರವರು ನನ್ನ ಹಿಸ್ಸೆಗೆ 3 ಎಕರೆ 27 ಗುಂಟೆ ಜಮೀನು ಬಿಟ್ಟುಕೊಟ್ಟರು. 3 ಎಕರೆ 27 ಗುಂಟೆ ಜಮೀನು ಬಿಟ್ಟುಕೊಟ್ಟಿದ್ದ ಮೇರೆಗೆ ಯಾವುದೇ ಕಾಗದ ಆಗಿರುವುದಿಲ್ಲ. ಈರಪ್ಪ ಇನ್ನು ಜೀವಂತ ಇದ್ದಾರೆ. ಈರಪ್ಪ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಕೊಡಬಹುದು ಎಂದರೆ ಸರಿ .ಈರಪ್ಪ ಬಿಟ್ಟುಕೊಟ್ಟ 3 ಎಕರೆ 27 ಗುಂಟೆ ಜಮೀನಿನ ಚಕುಬಂದಿ ನನಗೆ ಹೇಳಲು ಬರುವುದಿಲ್ಲ. 7 ಎಕರೆ 13 ಗುಂಟೆ ಜಮೀನಿನ ಚಕುಬಂದಿ ಪಶ್ಚಿಮಕ್ಕೆ ಮಹೇಶ ಕುರಗೋಡಿ ಅವರ ಜಮೀನು, ಪೂರ್ವಕ್ಕೆ ಸರಕಾರಿ ರಸ್ತೆ, ಉತ್ತರಕ್ಕೆ ಬಸವರಾಜ ಕಲಿವಾಳ ಅವರ ಜಮೀನು, ದಕ್ಷಿಣಕ್ಕೆ ಈರಪ್ಪ ಮಲಕಪ್ಪ ಕಲಿವಾಳ ಅವರ ಜಮೀನು ಬರುತ್ತದೆ. 3 ಎಕರೆ 27 ಗುಂಟೆ ಜಮೀನಿನ ಚಕುಬಂದಿ ಪಶ್ಚಿಮಕ್ಕೆ ಮಹೇಶ ಕುರಗೋಡಿ ಅವರ ಜಮೀನು, ಪೂರ್ವಕ್ಕೆ ಸರಕಾರಿ ರಸ್ತೆ, ಉತ್ತರಕ್ಕೆ ಬಸವರಾಜ ಕಲಿವಾಳ ಅವರ ಜಮೀನು, ದಕ್ಷಿಣಕ್ಕೆ ಲಲಿತಾ ಕೋಂ ನಾಗರಾಜ ಕಲಿವಾಳ ಅವರ ಜಮೀನು ಬರುತ್ತದೆ. ಚಕುಬಂದಿಗೆ ಸಂಬಂದಪಟ್ಟಂತೆ ಯಾವುದಾದರು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ನನಗೆ ಸಂಬಂದಪಟ್ಟಂತೆ ದಾಖಲೆಗಳನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

5. ಸರ್ವೆ ನಂ 73 ರಲ್ಲಿ ಎರಡು ಹಿಸ್ಸೆ ಆಗಿರುತ್ತದೆ ಎಂದರೆ ಸರಿ. ಪೂರ್ವ ಮತ್ತು ಪಶ್ಚಿಮಕ್ಕೆ ಮಾರ್ಗ ಆಗಿರುತ್ತದೆ. ಪೂರ್ವಕ್ಕೆ ಒಂದು ಹಿಸ್ಸೆ ಮತ್ತು ಪಶ್ಚಿಮಕ್ಕೆ ಒಂದು ಹಿಸ್ಸೆ ಆಗಿರುತ್ತದೆ. ಪೂರ್ವ ಮತ್ತು ಪಶ್ಚಿಮಕ್ಕೆ ಯಾರು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ನಾವು ಸಣ್ಣವರಿದ್ದೆವು ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಸರ್ವೆ ನಂ 73/1 ಅ ಮತ್ತೆ ಪೂರ್ವಕ್ಕೆ 73/1 ಬ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ 73/1 ಬ ನಾಗರಾಜ ಮತ್ತು ಲಲಿತಾರವರಿಗೆ ಸಂಬಂದಪಟ್ಟ ಆಸ್ತಿ ಎಂದರೆ ಸರಿ. ಇದರ ಪ್ರಕಾರ 3 ಎಕರೆ 27 ಗುಂಟೆ ಮತ್ತು 3 ಎಕರೆ 26 ಗುಂಟೆ ಸರ್ವೆ ನಕಾಶೆ ಆಗಿರುತ್ತದೆ ಎಂದರೆ ಸರಿ. ಸದರಿ ನಕಾಶೆಯ ಪ್ರಕಾರ ನನ್ನ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಸರ್ವೆ ನಕಾಶೆಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ನಕಾಶೆಯನ್ನು ಹಾಜರುಪಡಿಸಿಲ್ಲ ಮತ್ತು ನನ್ನ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಿಸ್ಸೆಯಲ್ಲಿ ಬರುತ್ತದೆ ಮತ್ತು ಅದರ ಚಕುಬಂದಿ ಎನು ಇರುತ್ತದೆ ಎಂದು

ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಾಖಲೆಗಳನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

Sd/-

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.